



Anusandhanvallari
Vol 2022, No.1
February 2022
ISSN 2229-3388

# ಕನ್ನಡ ಶಾಸನಗಳಲ್ಲಿ ಮಹಿಳೆಯರ ಸ್ಥಾನ-ಮಾನ

**ಡಾ.ರಾಜಕುಮಾರ**

**ಕನ್ನಡ ಸಹ ಪ್ರಾಧ್ಯಾಪಕಸರಕಾರಿ ಪ್ರಥಮ ದರ್ಜೆ ಕಾಲೇಜು, ಬೀದರ, ಕರ್ನಾಟಕ, ಭಾರತ**

Email Id: rajallure@gmail.com

## ಪೀಠಿಕೆ

ಒಂದು ಕುಟುಂಬದ ಬೆಳವಣಿಗೆಯಲ್ಲಿ ಪುರುಷರಷ್ಟೇ ಸ್ತ್ರೀಯರ ಪಾತ್ರ ಪ್ರಾಮುಖ್ಯತೆ ಪಡೆದುಕೊಂಡಿದೆ. ಹಾಗೆಯೇ ಒಂದು ನಾಡು, ರಾಷ್ಟ್ರ ಪ್ರಗತಿಹೊಂದಬೇಕಾದರೆ ಅಲ್ಲಿ ಮಹಿಳೆಯರ ಪಾತ್ರ ಅತೀ ಮುಖ್ಯವಾಗಿರುತ್ತದೆ. ಪ್ರಾಚೀನ ಕಾಲದಲ್ಲಿಯೂ ಮಹಿಳೆಯರಿಗೆ ಇದ್ದ ಸ್ಥಾನಮಾನಗಳ ಬಗ್ಗೆ ಶಾಸನಗಳು ಉಲ್ಲೇಖಿಸುತ್ತವೆ. ಉದಾಹರಣೆಗೆ ನೋಡುವುದಾದರೆ ಶಾತವಾಹನರ ರಾಣಿಯರು ಸ್ವತಃ ಶಾಸನಗಳನ್ನು ಹಾಕಿಸಿದರೆನ್ನಲಾಗಿದೆ. ಅದರಲ್ಲಿ ಅವರು ನೀಡಿದ ದಾನದತ್ತಿಗಳು ಮತ್ತು ಅವರು ನರ್ಮಿಸಿದ ಚೈತ್ಯಾಲಯಗಳು, ವಿಹಾರ ಹಾಗೂ ಶಿಲಾಮರ್ತಿಗಳ ರಚನೆಗಳ ಕುರಿತಾಗಿ ಮತ್ತು ಬೌದ್ಧ ಸಂಘಗಳಿಗೆ ಅವರು ನೀಡಿದ ದಾನದ ವಿವರಗಳು ಮುಖ್ಯವಾಗುತ್ತವೆ. ಶಾತವಾಹನರ ರಾಣಿ ಗೌತಮಿ, ಬಾಲಶ್ರೀ ಬನವಾಸಿಯ ಚುಟುಕುಲಾನಂದ ರಾಜಕುಮಾರಿ ಶಿವಸ್ಕಂದ ನಾಗಾಶ್ರೀ ಅಲ್ಲದೇ ಇಕ್ಷಾಕು ಮನೆತನದ ರಾಣಿಯರು ನಾಗರ್ಜುನ ಕೊಂಡದಲ್ಲಿ ಹಲವಾರು ಕಟ್ಟಡಗಳನ್ನು ನರ್ಮಿಸಿದರೆಂದು ತಿಳಿದುಬರುತ್ತದೆ.

## ಸಾಮಾಜಿಕ ರಂಗದಲ್ಲಿ ಮಹಿಳೆ

ಸ್ವತಃ ಆರನೇ ವಿಕ್ರಮಾದಿತ್ಯನು ಹಲವಾರು ಸ್ತ್ರೀಯರನ್ನು ಮದುವೆಯಾಗಿದ್ದನು. ಆತನ ರಾಣಿಯರು ಸ್ವತಂತ್ರವಾಗಿ ರಾಜನ ಪರವಾಗಿ ಆ ಭಾಗದ ರಾಣಿಯಾಗಿ ಆಳ್ವಿಕೆಮಾಡುತ್ತಿದ್ದರು. ವಿಕ್ರಮಾಧಿತ್ಯನ ರಾಣಿಯರಲ್ಲಿ ಪಿರಿಯರಸಿ, ಪಟ್ಟಮಹಾದೇವಿ ಮತ್ತು ರಾಣಿ ಎಂಬುವುದಾಗಿ ಮೂರು ರ್ಗಾಗಳಾಗಿ ಮಾಡಲಾಗಿದೆ. (ಡಾ. ಡಿ.ಎಂ. ನಾಗರಾಜು, ಕಲ್ಯಾಣ ಚಾಲುಕ್ಯ ಆರನೇ ವಿಕ್ರಮಾದಿತ್ಯನ ಶಾಸನಗಳ ಸಾಂಸ್ಕೃತಿಕ ಅಧ್ಯಯನ).

ಆರನೇ ವಿಕ್ರಮಾದಿತ್ಯನ ರಾಣಿ ಚಂದಲಾದೇವಿಯನ್ನು ಕುರಿತಂತೆ ಮೊಟ್ಟಮೊದಲ ಶಾಸನ ಕಲಬರ್ಗಿ ಶಾಸನ ಆಳಂದ ತಾಲೂಕಿನ ಕ್ರಿ.ಶ. ೧೦೮೨ರ ಶಾಸನವಾಗಿದೆ. ಈ ಶಾಸನದಲ್ಲಿ ಸೋಮೇಶ್ವರ ದೇವರಿಗೆ ದಾನ ನೀಡಿದ ವಿವರ ದೊರೆಯುತ್ತದೆ. ಅಲ್ಲದೇ ಅವುಗಳಿಗೆ ಸ್ವಸ್ತನವರತ ಪರಮಕಲ್ಯಾಣಭುದ್ಯಯ ಸಹಸ್ರ ಫಲಭೋಗಭಾಗಿನಿ ವಾಟಕ್ಕೆ ಮದದ್ವಿರದಗಾಮಿನಿ, ರಾಯಜಗದಲ ಮನೋಹರಚ್ಚರಿಮಪ್ಪ ಸವಲೇ ಮದಭಂಜನೆ ರಾಯಭಂಗಾರ ದೇರ್ಮ್ಕ್ಷಯೋನಿಧಿ ಪ್ರವದ್ಧಮಾನ ಚಂದ್ರವದನೆ ಸೌಭಾಗ್ಯನಿದನೆ ಎಂದು ಹೇಳುತ್ತಾ ಅವಳನ್ನು ನೃತ್ಯ ವಿದ್ಯಾಧರೆ, ಚಂದಲ ದೇವಿಯರೆಂದು ಹೇಳಿದೆ. ಮತ್ತೊಂದು ಶಾಸನದಲ್ಲಿ ಇವಳನ್ನು ಮಲಪವಿದ್ಯಾಧರೆ ಸಕಲ ಕಳಾಧರೆ ರಾಯಮನೋಜರಾಜರಲಿ ಆಡಬಳ ಸರಸ್ವತಿ ನೃತ್ಯವಿದ್ಯಾಧರೆ, ಸವತಿ ಗಜಕೇಸರಿ, ಕಲಿಕಾಲ ಸರಸ್ವತಿ, ಶ್ರೀಮತಿಭುವನಮಲ್ಲದೇವ ವಿಶಾಳವಕ್ಷ ಸ್ಥಳ ನಿವಾಸಿನಿಯರಪ್ಪ ಶ್ರೀಮತ್ ಪಿರಿಯರಸಿ, ಚಂದಲದೇವಿಯರು ಎಂದು ಪ್ರಶಸ್ತಿಯಲ್ಲಿ ರ್ಣಿಸಲಾಗಿದೆ. ಅಲ್ಲದೇ ಚಂದಲದೇವಿಯ ಭಕ್ತಳಾಗಿದ್ದು, ಸಾಕಷ್ಟು ವಿದ್ಯಾಧರೆಯಾಗಿದ್ದು, ಪತಿಭಕ್ತಿಶಿರೋಮಣಿಯಾಗಿದ್ದು, ಸಾಕಷ್ಟು ದಾನ ರ್ಮದಲ್ಲಿಯೂ ಎತ್ತಿದ ಕೈಯಾಗಿದ್ದಾಳೆಂದು, ಅತ್ಯಂತ ಸ್ಫುರರೂಪಿಯಾಗಿದ್ದಳೆಂದು, ಆದುದರಿಂದಲೇ ಬಿಲ್ಹಣಕವಿಯು ಚಂದಲೇ ವಿಕ್ರಮರ ವಿವಾಹವನ್ನು ರಸವತ್ತಾಗಿ ಚಿತ್ರಿಸಿದ್ದನ್ನು ವಿಕ್ರಮಾಂಕದೇವ ಚರಿತೆಯಲ್ಲಿ ನೋಡಬಹುದು.

ಕ್ರಿ.ಶ. ೧೧೧೦ರ ಕಾಳಗಿ ಶಾಸನದಲ್ಲಿಯೂ ಪಿರಿಯರಸಿ ಎಂದೇ ಹೆಸರಿಸಿದೆ. ಆಳಂದ ತಾಲೂಕಿನ ರುದ್ರವಾಡಿಯಲ್ಲಿ (ನಾಗರಾಜು ಎಸ್., ರುದ್ರವಾಡಿಯು ಎರಡು ಶಾಸನಗಳು, ಪ್ರಬುದ್ಧ ರ್ನಾಟಕ, ಸಂಪುಟ ೫೦, ಸಂಚಿಕೆ ४) ದೊರೆತ ಒಂದು ಶಾಸನದಲ್ಲಿ ಅಗ್ರಹಾರ ರುದ್ರವಾಡಿ ಅಗ್ರಹಾರದಲ್ಲಿ ಶ್ರೀ ಕೇಶವ ದೇವರಿಗೆ ಮತ್ತು ಅಲ್ಲಿಯ ವಶಿಷ್ಠ ಗೋತ್ರದ ವಾಸುದೇವಭಟ್ಟ ಉಪಾಧ್ಯರಿಗೆ ಹಾಗೂ ೫೦ ಜನ ಮಹಾಜನರಿಗೆ ೧೨೦ ಗದ್ಯಣ ಪೊನ್ನನ್ನು ರಾಣಿ ಚಂದಲಾದೇವಿ ಅಪ್ಪಣೆ ಮೇರೆಗೆ ನೀಡಿದ್ದಾನೆ. ಕ್ರಿ.ಶ.೧೧೦೬ರ ಇದೇ ಜಿಲ್ಲೆಯ ಬೊಮ್ಮನಹಳ್ಳಿಯ ಶಾಸನವು ಚಾಳುಕ್ಯದೊರೆ ತ್ರಿಭುವನ ಮಲ್ಲದೇವನ ರಾಣಿ ಧಾರಲದೇವಿಯು ಗುರುವಾರದಂದು ಗೋನಾರ ಪ್ರಭು

ANUSANDHANVALLARI
ISSN: 2229-3388

Anusandhanvallari
Vol 2022, No.1
February 2022
ISSN 2229-3388

ಮಹಾಪ್ರಧಾನ ಶ್ರೀಕರಣ ದಂಡನಾಯಕ ಧುರಿಮಯ್ಯಂಗೆ, ಮತ್ತು ದಂಡನಾಯಕ ಭೋಗಿಮಯ್ಯಗಳಿಗೆ ದಾನವನ್ನು ನೀಡಿದ ವಿಚಾರವನ್ನು ತಿಳಿಸುತ್ತದೆ.

ಕ್ರಿ.ಶ. ೧೧೦೫ರ ಇದೇ ಜಿಲ್ಲೆಯ ಮುದನೂರಿನ ಒಂದು ಶಾಸನವು ಕಲ್ಯಾಣದ ದೊರೆ ಆರನೇ ವಿಕ್ರಮಾದಿತ್ಯನ ಮಹಾಮಂಡಳೇಶ್ವರನಾದ ಜೋಗಮರಸನ ಹೆಂಡತಿ ತಾರಾದೇವಿಯನ್ನು "ಸಹಸ್ರಫಳಭೋಗಭಾಗಿನಿ, ದ್ವಿತೀಯ ಲಕ್ಷ್ಮೀಸಮಾನೆ, ಶೃಂಗಾರವಿದ್ಯಾಧರೆ, ಸಕಳಕಳಾಧರೆ, ಚಿಂತಾಮಣಿ ಯಾಶ್ರಿತಜನಕಲ್ಪತರು, ಅಮೃತವಾಣಿ, ಸಮನ್ವಿತಗೋತ್ರಪವಿತ್ರೆ, ಸುಜನೈಕಮಿತ್ರೆ, ದಾನವಿನೋದೆ" ಇತ್ಯಾದಿಯಾಗಿ ರ್ಣಿಸಿ, ಈಕೆಯು ಅಗ್ರಹಾರದ ಮುದಿನೀರೂರೊಡೆಯ ಪ್ರಮುಖ ಅಶೇಷ ಮಹಾಜನಂಗಳಿಗೆ ೫೦ ಗದ್ಯಾಣ ಪೊನ್ನ ಕೊಟ್ಟು, ತನ್ನದಾಗಿಸಿಕೊಂಡು ಉತ್ತರೇಶ್ವರ ದೇವರಿಗೆ ದಕ್ಷಿಣ ಹೊಲದಲ್ಲಿ ರಾಮೇಶ್ವರ ದೇವರಿಗೆ ಭೂದಾನ ಮಾಡಿದಳೆಂದು ತಿಳಿಸಿದೆ.ಕ್ರಿ.ಶ. ೧೦೯೯ರ ಕಲ್ಬುರ್ಗಿ ಜಿಲ್ಲೆಯ ಹುಣಿಸಿ ಹಡಗಲಿ ಶಾಸನವು ಚಾಳುಕ್ಯ ದೊರೆ ತ್ರಿಭುವನಮಲ್ಲದೇವನ ಪಿರಿಯರಸಿ, ಚಂದಲ ದೇವಿಯು ಅಲಂದೆ ೧೦೦೦ದ ಅನೇಕ ಭತ್ತಗ್ರಾಮಗಳನ್ನು ಆಳುತ್ತಿದ್ದುದನ್ನು ಉಲ್ಲೇಖಿಸಿ, ಆಕೆಯನ್ನು "ದೀನಾನಾಥ ಕಥಕ ವೈತಾಳಿಕ ಸುರ್ಣ್ವಿಷ್ಟ ವಂದಿ ಚಿಂತಾಮಣಿ ಅಂತಃಪುರಚೂಡಾಮಣಿಮಲಪ ವಿದ್ಯಾಧರಿ ನ್ರಿತ್ಯವಿದ್ಯಾಧರಿ ಸವತೀಗಜಕೇಸರಿ ಕಲಿಕಾಲ ಸರಸ್ವತಿ" ಇತ್ಯಾದಿಯಾಗಿ ರ್ಣಿಸಿದೆ.

ಕ್ರಿ.ಶ.೧೦೯೫ರ ಇದೇ ಜಿಲ್ಲೆಯ ಇಂಗಳಗಿ ಶಾಸನವು ದೊರೆ ಚಾಳುಕ್ಯ ವಿಕ್ರಮಾದಿತ್ಯನು ರಾಜಧಾನಿ ಕಲ್ಯಾಣದಿಂದ ಆಳುತ್ತಿದ್ದಾಗ, ಈತನ ರಾಣಿ ಜಾಕಲದೇವಿಯು ಇಂಗಳಗಿ ೩೦೦ರಿಂದ ಆಳುತ್ತಿದ್ದಳೆಂದು ತಿಳಿಸಿದೆ. ಈಕೆಯನ್ನು ಈ ಶಾಸನವು 'ಚತರ್ವ್ವಿಧ ದಾನಚಿಂತಾಮಣಿ' ಎಂದು ಮುಂತಾಗಿ ರ್ಣಿಸಿ ಇವಳು ಅತ್ಯುನ್ನತವಾದ ಜಿನೇಂದ್ರಗೇಹವನ್ನು ಮಾಡಿಸಿ, "ಮಲ್ಲಿಸೇಣಭಟ್ಟಾರಕರ ಕಾಲಂ ರ್ಚ್ಚಿ ಧಾರಾಪರ್ವ್ವಕಂ ಮಾಡಿ" ಭೂದಾನ ನೀಡಿದಳೆಂಬ ವಿಚಾರವನ್ನು ತಿಳಿಸುತ್ತದೆ.

ಕ್ರಿ.ಶ. ೧೧೦೭ರ ಆಂಧ್ರಪ್ರದೇಶದ ಎರಡು ಶಾಸನಗಳು ಚಾಳುಕ್ಯ ದೊರೆ ತ್ರಿಭುವನ ಮಲ್ಲದೇವನು ಆಳ್ವಿಕೆಯನ್ನು ಮಾಡುವಾಗ ಈತನ ರಾಣಿ ಅಭಿನವ ಸರಸ್ವತಿ (ಮಲೆಯಮತಿ) ಎಂಬುವವಳು ಅಲಂಪುರದ ಬ್ರಹ್ಮೇಶ್ವರದೇವರ ಅಂಗಭೋಗಕ್ಕಾಗಿ, ಖಂಡಸ್ಫುಟಿತಜೀರ್ಣ್ಣೋ ದ್ಧಾರಕ್ಕಾಗಿ, ಸುಧಾರ್ನ್ಮಾದ್ಯುಪಭೋಗಕ್ಕಾಗಿ, ಪಂಚೋಪಚಾರ ಪೂಜೆಗಾಗಿ, ಐಜೆ ಮೂನೂರರ ಬಳಿಯ ನುಂಡವಲಿ, ಬೋರುವೆಲ್ಲಿ, ಸಳಿಯೂರು ಕಡಂಬೂರುಗಳನ್ನು ಕನ್ನೆ ಮೂನೂರರ ಬಳಿ ವಡ್ಡಮಾನಿಯನ್ನೂ ಪರಮೇಶ್ವರ ದತ್ತಿಯಾಗಿ ನೀಡಿದಳೆಂದು ಉಲ್ಲೇಖಿಸಿವೆ; ಇದನ್ನು ಬ್ರಹ್ಮೇಶ್ವರದ ಮಹಾಸ್ಥಾನಾಧಿüಪತಿಯಾದ ಧರಣೀಂದ್ರರಾಸಿ ಪಂಡಿತನು ಪಡೆದನೆಂದು ಹೇಳಿದೆ.

ಕ್ರಿ.ಶ. ೧೧೨೭ರ ಕೊಪ್ಪಳ ಜಿಲ್ಲೆಯ ಕುಕನೂರು ಶಾಸನವು ಬ್ರಾಹ್ಮಣ ಸ್ತ್ರೀÀಯರು ಕೂಡ ದೇವಾಲಯದ ಧರ್ಮಿಕ ಕರ್ಯಗಳಿಗಾಗಿ ಪುರುಷರಂತೆಯೇ ದಾನದತ್ತಿಯನ್ನು ನೀಡುತ್ತಿದ್ದರೆಂದು ತಿಳಿಸುತ್ತದೆ. ಈ ಶಾಸನವು ಚಾಳುಕ್ಯ ದೊರೆ ಆರನೆ ವಿಕ್ರಮಾದಿತ್ಯನ ಕಾಲದ್ದು. ಇಲ್ಲಿ ಗಂಗಾಧರಯ್ಯ ನಾಯಕನ ಮಗಳು ಕಾಮಿಯಕ್ಕಳು ತಮ್ಮ ವಂಶಕ್ಕೆ ಸಂಬಂಧಿಸಿದ ಐದು ಮತ್ತರು ಎರೆ ಭೂಮಿಯನ್ನು ಅಲ್ಲಿಯ ಶ್ರೀ ಸಾಸರ್ವ್ವರ ಕಯ್ಯೊಳು ರ್ವನಮಸ್ಯವಾಗಿ ಪಡೆದು ತಮ್ಮ ಹೆಗ್ಗೆರೆಯ ಸತ್ರಕ್ಕಾಗಿ ಎರಡು ಮತ್ತರು ಭೂಮಿಯನ್ನು ನೀಡಿದಳೆಂದೂ, ಗಂಗಾರ್ಯ್ಯನ ಮಗನಾದ ಶ್ರೀಪತಿನಾಯಕನ ಹೆಂಡತಿ ಚಾಮಿಕವ್ವೆಯು ಶ್ರೀಸಾಸರ್ವ್ವರ ಕೈಯಲ್ಲಿ ಪಡೆದು ಶ್ರೀಮೂಲಸ್ಥಾನದೇವರ ನಿವೇದ್ಯಕ್ಕಾಗಿ ತಮ್ಮ ಸ್ಥಳವಾದ ಹೆಗ್ಗೆರೆಯಲ್ಲಿ ಕಾಮಿಯಕ್ಕನ ಭಾಗದ ಒಂದು ಮತ್ತರು ದೇವರಿಗೆ ಭೂದಾನ ನೀಡಿದಳೆಂದೂ ಉಲ್ಲೇಖಿಸಿದೆ.

ಹಿಂದೆಯೇ ಹೇಳಿದಂತೆ, ಕ್ರಿ.ಶ.೧೧೨೦ರ ಕಲ್ಬುರ್ಗಿ ಜಿಲ್ಲೆಯ ಹುಣಸಗಿ ಶಾಸನವು ಆರನೇ ವಿಕ್ರಮಾದಿತ್ಯನ ಪಟ್ಟಮಹಾದೇವಿ ಮಲೆಯಮತಿ ದೇವಿಯು 'ನಿತ್ಯ ಭೂಮಿದಾನ'ದಲ್ಲಿ ನಿರತಳಾಗಿದ್ದುದನ್ನು ತಿಳಿಸುತ್ತದೆ. ಇದ‌ಂದ ಈಕೆಯು ಭೂದಾನ ಮಾಡುವಲ್ಲಿ ಇತರ ರಾಣಿಯರಿಗಿಂತಲೂ ಮುಂದಿದ್ದಳೆಂದೂ, ಪ್ರತಿದಿನವು ಭೂದಾನ ನೀಡುತ್ತಿದ್ದಳೆಂದೂ ಊಹಿಸಬಹುದಾಗಿದೆ.

ಕ್ರಿ.ಶ.೧೦೫೧ರ ವರಂಗಲ್ ಜಿಲ್ಲೆಯ ಮಲ್ಲೇಶ್ವರಂನ ಶಾಸನವೊಂದು ಚಾಳುಕ್ಯದೊರೆ ತ್ರೆöÊಲೋಕ್ಯಮಲ್ಲದೇವನ ಮಹಾಮಂಡಳೇಶ್ವರನಾದ ಕುಮಾರ ವಿಜಯಾದಿತ್ಯದೇವನೂ ಮೈಳಲದೇವಿಯೂ ಕೂಡಿ ಅಗಸ್ತ್ಯೇಶ್ವರದೇವರ ಚತ್ರಕ್ಕೆ ಎರಡು ಗ್ರಾಮಗಳನ್ನು ದತ್ತಿಯಾಗಿ ನೀಡಿದರೆಂದು ಉಲ್ಲೇಖಿಸುತ್ತದೆ. ಕ್ರಿ.ಶ. ೧೦೪೨-೬೮ರ ಮಹಬೂಬ್‌ನಗರ ಜಿಲ್ಲೆಯ ಗಂಗಾಪುರ ಶಾಸನವು ಮಹಾಮಂಡಳೇಶ್ವರ ಏಂಕಣಚೋಳ ಮಹಾರಾಜ ಹಾಗೂ ಪದ್ಮಲದೇವಿಯರ ಮಗಳಾದ ಮಲ್ಲಹಣಿದೇವಿ ಎಂಬುವವಳು ಭೀಮೇಶ್ವರ ದೇವಾಲಯವನ್ನು ಮಾಡಿಸಿದಳೆಂದು ಹೇಳುತ್ತದೆ.ಕ್ರಿ.ಶ.೧೧೨೧ರ ಇದೇ ಪ್ರದೇಶದ ಭೂತಪುರ ಶಾಸನವು ಚಾಳುಕ್ಯ ದೊರೆ ಆರನೆಯ

ವಿಕ್ರಮಾದಿತ್ಯನ ರಾಣಿ ಚಂದಲದೇವಿಯರ ಮಗ ಹಾಗೂ ಮಹಾ ಮಂಡಳೇಶ್ವರ ಕುಮಾರ ತೈಲಪದೇವನೂ ಆತನ ರಾಣಿ ಲಕ್ಷ್ಮಾರ್ಂಮದೇವಿ ಹಾಗೂ ಮಕ್ಕಳು ಸೇರಿ ಪರ್ಮಾಡಿದೇವ ಬಿಕ್ಕಿದೇವನೊಂದಿಗೆ ಆದಿವಾರದಂದು ನೆಕ್ಕೊಂಡೆಯ ಶ್ರೀರಾಮೇಶ್ವರ ದೇವರ ಅಂಗಭೋಗ ಮತ್ತು ರಂಗಭೋಗಕ್ಕಾಗಿ ಗಂಧ, ಧೂಪ, ದೀಪ, ನಿವೇದ್ಯಕ್ಕಾಗಿ ಮತ್ತು ಅಲ್ಲಿಯ ತಪೋಧನರ ಆಹಾರಕ್ಕಾಗಿ "ತ್ರಿಭೋಗಾಭ್ಯಂತರವಾಗಿ ಕಂದೂರಿನ ಸಾವಿರದ ನೂರು ಬಾಡದ ಸಮಕಟ್ಟಿನ ಕಂದೂರು ೭೦ ರ ಬಳಿಯ ಬಾಡಂ ಬೂದುಪೂರಂ" ದಾನವಾಗಿ ನೀಡಿದರೆಂದು ಹೇಳುತ್ತದೆ. ಕ್ರಿ.ಶ.೧೧೦೫ರ ಸುರಪುರ ತಾಲೂಕಿನ ಮುದನೂರ ಶಾಸನವು ಕಲ್ಯಾಣ ದೊರೆ ತ್ರಿಭುವನ ಮಲ್ಲದೇವನ ಮಹಾಮಂಡಳೇಶ್ವರನಾದ ಜೋಗಮರಸರನ ಹೆಂಡತಿ ತಾರಾದೇವಿಯನ್ನು "ದಾನವಿನೋದೆ ಸಕಳ ರ್ಮಶಾಸ್ತರ್ಥ ಪ್ರಮೋದೆ ಕಸ್ತೂರೀಕಾಮೋದೆಯರಪ್ಪ ಶ್ರೀಮತ್ತಾರಾದೇವಿಯರು" ಎಂದು ಹೊಗಳಿ, ಈಕೆಯು ಮುದೆನೂರು ಅಗ್ರಹಾರದ ಒಡೆಯರಾದ ಪ್ರಮುಖ ಅಶೇಷ ಮಹಾಜನಗಳಿಗೆ ಗದ್ಯಾಣ ಪೊನ್ನ ಕೊಟ್ಟು, ಉತ್ತರೇಶ್ವರ ದೇವರಿಗೆ ದಕ್ಷಿಣ ಭಾಗದ ಹೊಲದಲ್ಲಿ ರಾಮೇಶ್ವರ ದೇವರ ಮಾನ್ಯದ ಕೆಯ್ಯಿಂ ಪಶ್ಚಿಮಕ್ಕೆ ೧೦ ಮತ್ತರು ಭೂಮಿಯನ್ನು ದಾನ ನೀಡಿದಳೆಂದು ಉಲ್ಲೇಖಿಸುತ್ತದೆ. ಕ್ರಿ.ಶ. ೧೦೩೧ರ ರಾಯಚೂರ ಜಿಲ್ಲೆಯ ಬಲ್ಲಟಗಿ ಶಾಸನವು ಚಾಲುಕ್ಯ ದೊರೆ ಜಗದೇಕಮಲ್ಲನ ರಾಣಿ ಸೋಮಲದೇವಿಯು ದಿಗ್ಗಿಗೆಯ ಮಧುಸೂದನ ಭಟ್ಟರಿಗೆ ಭತ್ತಗ್ರಾಮ ಬಳ್ಳನಿಟ್ಟಗೆಯಲ್ಲಿ ಹಿರಿಯಕೋಲಲ್ಲಿ ೧೦೦ ಮತ್ತರು ಭೂಮಿಯನ್ನು ದಾನ ಮಾಡಿದಳೆಂದು ತಿಳಿಸುತ್ತದೆ.

ಕ್ರಿ.ಶ. ೧೦೫೮ರ ಇದೇ ಊರಿನ ಶಾಸನವೊಂದು ಚಾಳುಕ್ಯ ದೊರೆ ತ್ರೈಳೋಕ್ಯಮಲ್ಲ ದೇವನ ರಾಣಿ ಚಾಮಲದೇವಿಯು ಮಲೆಯ (ಮಾಳಾಪೂರ) ನೆಲೆವೀಡಿನಲ್ಲಿದ್ದಾಗ, ಅಕ್ಷಯ ರ್ವ ಇದ್ದುದರಿಂದ ತುಂಗಾಭದ್ರೆ ಕೃಷ್ಣವೇಣ್ಣಾನದೀ ಸಂಗಮದಲ್ಲಿ ತರ್ಥಸ್ನಾನ ಕೈಗೊಂಡುದುರ ನೆನಪಿಗಾಗಿ ಎಡೆದೊರೆ ೨೦೦೦ದಲ್ಲಿಯ ಮೊಸಳಿಕಲ್ಲು ೩೦೦ರಲ್ಲಿ ಭತ್ತಗ್ರಾಮ ಬಲ್ಲಟಗಿಯಲ್ಲಿ ದಾನಮಾಡಿದಳೆಂದು ದಾಖಲಿಸಿದೆ.

ಕ್ರಿ.ಶ.೧೧೧೫ರ ಇದೇ ಊರಿನ ಶಾಸನವು ಚಾಳುಕ್ಯ ದೊರೆ ತ್ರಿಭುವನಮಲ್ಲದೇವನ ರಾಣಿ ಚಂದಲದೇವಿಯು ಕಲಿದೇವರ ನೈವೇದ್ಯ ಅಂಗಭೋಗ, ಖಂಡಸ್ಫುಟಿತ ಜರ್ಣೋದ್ಧಾರಕ್ಕಾಗಿ ೧೨ ಮತ್ತರು ಕರಿಯ ನೆಲವನ್ನು ದಾನ ನೀಡಿದಳೆಂದು ಉಲ್ಲೇಖಿಸುತ್ತದೆ.

ಹೀಗೆ ಅಂದಿನ ಮಹಿಳೆಯರು ರಾಜಕೀಯ ರಂಗದಲ್ಲಿಯೂ ಸಾಮಾಜಿಕ ರಂಗದಲ್ಲಿಯೂ ಮಹತ್ತರ ಪಾತ್ರವಹಿಸಿದ್ದರು. ಅವುಗಳಲ್ಲಿ ಧರ್ಮಿಕ ವಿಷಯದಲ್ಲಿ ಹೆಚ್ಚಿನ ಆಸ್ಥೆ ಹೊಂದಿದ್ದರೆಂದೂ, ಅದಕ್ಕಾಗಿಯೇ ದೇವಾಲಯಗಳ ನರ್ಮಾಣ, ಅವುಗಳ ಜರ್ಣೋದ್ಧಾರ ಮಾಡಿಸುವುದು, ಅಲ್ಲದೆ ದೇವರ ಅಂಗಭೋಗ ರಂಗಭೋಗಗಳಿಗಾಗಿ ದಾನದತ್ತಿ ನೀಡುವುದು ಕಂಡುಬರುತ್ತದೆ. ಅಲ್ಲದೆ ತಪೋಧನರ ಜೀವನೋಪಾಯಕ್ಕಾಗಿ, ಓದುವ ವಿದ್ಯರ್ಥಿಗಳ ಆಹಾರಕ್ಕಾಗಿ, ಛತ್ರಗಳ ನರ್ವಹಣೆಗಾಗಿ ಹೀಗೆಯೆ ಹಲವು ಹತ್ತು ರೀತಿಯ ಸಮಾಜಮುಖಿ ಕರ್ಯಗಳಲ್ಲಿ ಮೇಲ್ವದ ಮಹಿಳೆಯರಲ್ಲದೆ, ಸಾಮಾನ್ಯ ರ್ಗದ ಮಹಿಳೆಯರು ಕೂಡ, ತಮಗಾದ ರೀತಿಯಲ್ಲಿ ದಾನದತ್ತಿಗಳನ್ನು ನೀಡಿದುದನ್ನು, ಇನ್ನೂ ಕೆಲವು ಕಡೆ ಸತಿ ಪತಿಗಳೂ ಮಕ್ಕಳೂ ಕೂಡಿ ದಾನ ನೀಡಿರುವುದನ್ನು ಕಾಣಬಹುದಾಗಿದೆ.

ಅಂತೂ ಮಹಿಳೆಯರ ಕರ್ಯ ಚಟುವಟಿಕೆಗಳನ್ನು ಆಡಳಿತ ರಂಗ, ಧರ್ಮಿಕ ರಂಗ ಮತ್ತು ಸಾಮಾಜಿಕರಂಗ ಎಂದು ಮೂರು ರಂಗಗಳಿಗೆ ಹೊಂದಿಸಬಹುದು. ಇದು ಅವರ ಪ್ರಧಾನ ರಂಗವಾದ ಕೌಟುಂಬಿಕ ರಂಗಕ್ಕೆ ಹೊರತಾದುದು. ಅವರು ವಿದ್ಯೆಗಳಲ್ಲಿ ಕಲೆಗಳಲ್ಲಿ ಕೂಡ ಪ್ರಾವೀಣ್ಯ, ನೈಪುಣ್ಯಗಳನ್ನು ಗಳಿಸಿದ್ದಾರೆಂಬುದನ್ನು ಇಲ್ಲಿ ಮನಗಾಣಬಹುದು.

ಗ್ರಂಥ ಋಣ

1. ಹನುಮಾಕ್ಷಿ ಗೋಗಿ,ಕಲಬುರಗಿ ಜಿಲ್ಲೆಯ ಶಾಸನಗಳು,ಶಿವಚಂದ್ರ ಪ್ರಕಾಶನ,ನವನಗರ ಹುಬ್ಬಳ್ಳಿ-೧೯೯೭
2. ದೇವರಕೊಂಡಾರೆಡ್ಡಿ ಮತ್ತು ಇತರರು,ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ.೨.ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,ವಿದ್ಯಾರಣ್ಯ,ಬಲ್ಲಾರಿ ಜಿಲ್ಲೆ-೧೯೯೯
3. ಗಣೇಶ ಕೆ.ಆರ್ ಮತ್ತು ಶೇಷಶಾಸ್ತ್ರೀ ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ.೫,ಭಾಗ-೨ ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,ವಿದ್ಯಾರಣ್ಯ,ಬಲ್ಲಾರಿ ಜಿಲ್ಲೆ-೨೦೦೧

ANUSANDHANVALLARI
ISSN: 2229-3388

Anusandhanvallari
Vol 2022, No.1
February 2022
ISSN 2229-3388

4. ದೇವರಕೊಂಡಾರೆಡ್ಡಿ ಮತ್ತು ಇತರರು,ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ.೭.ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,ವಿದ್ಯಾರಣ್ಯ,ಬಲ್ಲಾರಿ ಜಿಲ್ಲೆ-೨೦೦೩
5. ದೇವರಕೊಂಡಾರೆಡ್ಡಿ ಮತ್ತು ಹನುಮಾಕ್ಷಿ ಗೋಗಿ ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ.೮.ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ,ವಿದ್ಯಾರಣ್ಯ,ಬಲ್ಲಾರಿ ಜಿಲ್ಲೆ-೨೦೦೬
6. ಶಿವಾನಂದ ವಿ.: ಹೈದರಾಬಾದು ರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು, ಬನಾರಸ ಹಿಂದು ಶ್ವವಿದ್ಯಾಲಯ, ವಾರಣಾಸಿ, ೧೯೯೨
7. ಚೆನ್ನಕ್ಕ ಎಲಿಗಾರ : ಶಾಸನಗಳಲ್ಲಿ ರ್ನಾಟಕದ ಸ್ತ್ರೀÃಸಮಾಜ, ರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೦.